I/731762/2024

ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: DTE-CDC0LRDC/15/2023 (1630436)

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು
ದಿನಾಂಕ: 30/12/2024.

## ಸುತ್ತೋಲೆ

2024-25 ನೇ ಸಾಲಿನಲ್ಲಿ "45ನೇ ರಾಜ್ಯಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಸಂಸ್ಥೆಗಳು ಮತ್ತು ಕ್ರೀಡಾಪಟುಗಳಿಗೆ ಸೂಚನೆಗಳು:-

1. ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳು ದಿನಾಂಕ: 04-01-2025 ರೊಳಗೆ BTE-LINX ಮುಖೇನ ನೋಂದಾಯಿಸತಕ್ಕದ್ದು.
2. ಸಂಸ್ಥೆಯ ಹಂತದಲ್ಲಿ ನಡೆದ ಕ್ರೀಡಾಕೂಟದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ರಾಜ್ಯ ಮಟ್ಟದ ಕ್ರೀಡಾಕೂಟಕ್ಕಾಗಿ ಕ್ರೀಡಾಪಟುಗಳ ಹೆಸರು/ಹೆಸರಿನ ಪಟ್ಟಿಯನ್ನು ಕಳುಹಿಸಬೇಕು.
3. ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಸ್ಪರ್ಧೆಗಳು ನಡೆಯುವಾಗ, ಸ್ಪರ್ಧಾಳುಗಳು ನಿಗದಿತ ಅಂಕಣದಲ್ಲಿ ಇರುವಂತೆ ಕ್ರಮ ವಹಿಸುವ ಜವಾಬ್ದಾರಿಯು ಪಾಲಿಟೆಕ್ನಿಕ್ ಸಂಸ್ಥೆಗಳಿಂದ ನಿಯೋಜಿಸಲ್ಪಟ್ಟ ಉಪನ್ಯಾಸಕರ / ತಂಡದ ವ್ಯವಸ್ಥಾಪಕರ ಮುಖ್ಯ ಜವಾಬ್ದಾರಿಯಾಗಿರುತ್ತದೆ.
4. ಸಂಸ್ಥೆಯ ಒಬ್ಬ ಕ್ರೀಡಾಪಟುವಿಗೆ (ಒಬ್ಬ/ಒಬ್ಬಳು) ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.
5. ಸಂಸ್ಥೆಯ ವಿಶೇಷ ಚೇತನ ಕ್ರೀಡಾಪಟುವಿಗೆ ಮಾತ್ರ ಒಂದು ಸ್ಪರ್ಧೆಗೆ ಒಂದು ಸಂಸ್ಥೆಯಿಂದ ಇಬ್ಬರು ಕ್ರೀಡಾಪಟುಗಳು ಭಾಗವಹಿಸಲು ಅವಕಾಶವಿರುತ್ತದೆ.
6. ಸಂಸ್ಥೆಯ ಒಬ್ಬ ಕ್ರೀಡಾಪಟು (ಒಬ್ಬ/ಒಬ್ಬಳು) ಮೂರಕ್ಕಿಂತ ಹೆಚ್ಚು ಕ್ರೀಡೆಗಳಲ್ಲಿ ಭಾಗವಹಿಸುವಂತಿಲ್ಲ. (1ಟ್ರಾಕ್, 2 ಫೀಲ್ಡ್ ಅಥವಾ 2 ಟ್ರಾಕ್, 1 ಫೀಲ್ಡ್)
7. ಸ್ಪರ್ಧೆಗೆ ಒಮ್ಮೆ ನೋಂದಾಯಿಸಿದ ಕ್ರೀಡಾಪಟುಗಳ ಹೆಸರನ್ನು ಯಾವುದೇ ಕಾರಣಕ್ಕೂ ಬದಲಾಯಿಸುವಂತಿಲ್ಲ.
8. ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳು ಟ್ರ್ಯಾಕ್ ಸೂಟ್ (track suit) ಮತ್ತು ತಮ್ಮ ಸಂಸ್ಥೆಯವರು ನೀಡಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸುವುದು.
9. ಕ್ರೀಡಾಪಟುಗಳು ಕ್ರೀಡಾಂಗಣದಲ್ಲಿ ಆಯೋಜಕರು ನೀಡಿದಂತಹ ಚೆಸ್ಟ್ ನಂಬರ್ ಧರಿಸುವುದು ಕಡ್ಡಾಯವಾಗಿರುತ್ತದೆ.
10. ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಹೊರತುಪಡಿಸಿ ಮೈದಾನದಲ್ಲಿ ಬೇರೆ ಕ್ರೀಡಾಪಟುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ದಿನಾಂಕ: 06.01.2025 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 05.00 ಗಂಟೆಯೊಳಗೆ ಎಲ್ಲಾ ಸ್ಪರ್ಧಾಳುಗಳು ಹಾಗೂ ಉಸ್ತುವಾರಿ ವಹಿಸಿದ ಸಂಸ್ಥೆಗಳ ಉಪನ್ಯಾಸಕರು/ ತಂಡದ ವ್ಯವಸ್ಥಾಪಕರು ಮಂಗಳಾ ಕ್ರೀಡಾಂಗಣ, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು ಇಲ್ಲಿ ವರದಿ/ನೋಂದಾವಣಿ ಮಾಡಿಕೊಳ್ಳುವುದು.

1. ತಂಡದ ವ್ಯವಸ್ಥಾಪಕರುಗಳು / ಉಪನ್ಯಾಸಕರುಗಳು ದಿನಾಂಕ: 06/01/2025 ರ ಸಂಜೆ 5.30 ಗಂಟೆಗೆ ಕ್ರೀಡಾಂಗಣದ ಆವರಣದಲ್ಲಿ ಸಂಸ್ಥೆಯ ತಾತ್ಕಾಲಿಕ ಕಛೇರಿ ಬಳಿ ನಡೆಯುವ ಸಭೆಗೆ ಕಡ್ಡಾಯವಾಗಿ ಹಾಜರಾಗುವುದು.
2. ನೋಂದಣಿ ಅರ್ಜಿ ಜೊತೆಗೆ ಪ್ರವೇಶ ಶುಲ್ಕ ರೂ. 2,000/- ಗಳ ಡಿ.ಡಿ.ಯನ್ನು ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳು ಹಾಗೂ ರೂ. 15,000/-ಗಳ ಡಿ.ಡಿ.ಯನ್ನು ಎಲ್ಲಾ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಪ್ರಾಚಾರ್ಯರು, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು ಇವರ ಹೆಸರಿನಲ್ಲಿ ತರತಕ್ಕದ್ದು. ಪ್ರವೇಶ ಶುಲ್ಕ ರಹಿತ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕ್ರೀಡಾ ಮನೋಭಾವನೆಯಿಂದ ಶಿಸ್ತು ಹಾಗೂ ಸಂಯಮದಿಂದ ವರ್ತಿಸಬೇಕೆಂದು ಸೂಚಿಸಲಾಗಿದೆ.
4. ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ಪ್ರಾಂಶುಪಾಲರುಗಳು ಹಾಗೂ ತಂಡದ ವ್ಯವಸ್ಥಾಪಕರು/ಉಪನ್ಯಾಸಕರು ತಮ್ಮ ಸಹಕಾರವನ್ನು ನೀಡುವಂತೆ ಸೂಚಿಸಲಾಗಿದೆ.
5. ಸಂಸ್ಥೆಯಿಂದ ಭಾಗವಹಿಸುವ ಕ್ರೀಡಾಪಟುಗಳಿಗೆ ಹಾಗೂ ತಂಡದ ವ್ಯವಸ್ಥಾಪಕರಿಗೂ/ಉಪನ್ಯಾಸಕರಿಗೂ ವಸತಿ ಸೌಕರ್ಯವನ್ನು ಒದಗಿಸಲಾಗುವುದು. ತಂಗಲು ಅಗತ್ಯವಿರುವ ಹಾಸಿಗೆ, ಹೊದಿಕೆ, ಕೊಠಡಿಯ ಬೀಗ, ಸೊಳ್ಳೆ ಪರದೆ (Mosquito Coil), ಸೂಟ್‌ಕೇಸ್ ಇತ್ಯಾದಿಗಳನ್ನು ತಾವೇ ತರುವುದು. ಹೊರಗಡೆ ವಸತಿ ಬಯಸುವವರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

6. ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ/ಅನುದಾನಿತ/ಖಾಸಗಿ ಸಂಸ್ಥೆಯವರು ಆಯಾ ಸಂಸ್ಥೆಯಿಂದ ಎಷ್ಟು ಕ್ರೀಡೆಗಳಲ್ಲಿ ಕ್ರೀಡಾಪಟುಗಳು ಭಾಗವಹಿಸುವರೋ ಅದಕ್ಕೆ ಅನುಗುಣವಾಗಿ (ಒಂದು ಕ್ರೀಡೆಗೆ) ನೋಂದಣಿ ಶುಲ್ಕ ರೂ. 25/- ರಂತೆ ಕ್ರೀಡಾ ಆಯೋಜಕರಿಗೆ ಮುಂಗಡವಾಗಿ ಕ್ರೀಡೆ ಆಯೋಜಿಸುವ ನೋಂದಣಿ ಸ್ಥಳದಲ್ಲಿ ಪಾವತಿಸಬೇಕು.
7. ಕ್ರೀಡಾಕೂಟವು ದಿನಾಂಕ: 07/01/2025 ರಂದು ಪ್ರಾರಂಭವಾಗಲಿರುವುದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳು ಹಾಗೂ ತಂಡದ ವ್ಯವಸ್ಥಾಪಕರು/ ಉಪನ್ಯಾಸಕರು ಸದರಿ ದಿನದಂದು ಬೆಳಿಗ್ಗೆ 8.00 ಗಂಟೆಗೆ ಕ್ರೀಡಾಂಗಣದಲ್ಲಿ ಹಾಜರಿರತಕ್ಕದ್ದು.
8. ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕವಾದ ವಸತಿ ವ್ಯವಸ್ಥೆ ಮಾಡಲಾಗುವುದು.
9. ಎಲ್ಲಾ ಪಾಲಿಟೆಕ್ನಿಕ್ (Govt /Govt Aided / Private) ಕ್ರೀಡಾಕೂಟದಲ್ಲಿ ಭಾಗವಹಿಸುವ ಸಂಸ್ಥೆಗಳಿಂದ ಕ್ರೀಡಾಪಟುಗಳೊಂದಿಗೆ ಒಬ್ಬ ಉಪನ್ಯಾಸಕರು/ ತಂಡದ ವ್ಯವಸ್ಥಾಪಕರು ಮತ್ತು ಮಹಿಳಾ ಕ್ರೀಡಾಪಟುಗಳೊಂದಿಗೆ ಒಬ್ಬ ಮಹಿಳಾ ಉಪನ್ಯಾಸಕಿ/ ತಂಡದ ವ್ಯವಸ್ಥಾಪಕರುಗಳನ್ನು ನೇಮಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.
10. ಪಥ ಸಂಚಲನಕ್ಕಾಗಿ ತಮ್ಮ ಸಂಸ್ಥೆಯ ಧ್ವಜವನ್ನು, ತಂಡದ ಸಮವಸ್ತ್ರ ಮತ್ತು ಸಂಬಂಧಿಸಿದ ವಸ್ತುಗಳನ್ನು ತರುವುದು.
11. ಕ್ರೀಡಾಪಟುಗಳ ವಯಸ್ಸು 2 4 ಕ್ಕೆ ಮೀರಿರಬಾರದು. ಅವಶ್ಯಕತೆ ಇದ್ದಲ್ಲಿ, ವಯಸ್ಸಿಗೆ ಸಂಬಂಧಿಸಿದಂತೆ ಪರಾಮರ್ಶೆಗಾಗಿ ದಾಖಲಾತಿಯನ್ನು ಒದಗಿಸುವುದು.
12. ವಿಶೇಷ ಚೇತನ ಕ್ರೀಡಾಪಟುಗಳು ಸ್ಪೀಡೋ ಮೀಟರ್ ಇಲ್ಲದ ವ್ಹೀಲ್ ಛೇರನ್ನು ತಾವೇ ತರುವುದು.
13. ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅನುತ್ತೀರ್ಣರಾಗಿರುವ/ಫೇಲಾಗಿರುವ ವಿದ್ಯಾರ್ಥಿಗಳು (ಕ್ರೀಡಾಪಟುಗಳು) ಮತ್ತು ಸಂಸ್ಥೆಯವರಲ್ಲದ (ಹೊರಗಿನ) ವಿದ್ಯಾರ್ಥಿಗಳು (ಕ್ರೀಡಾಪಟುಗಳು) ಕ್ರೀಡಾಕೂಟದಲ್ಲಿ ಭಾಗವಹಿಸದಿರುವಂತೆ ಕ್ರಮ ವಹಿಸಲು ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.
14. ಕ್ರೀಡಾಪಟುಗಳು ತಮ್ಮ ಸಂಸ್ಥೆಯಿಂದ ನೀಡಿರುವ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ತಪ್ಪದೇ ಹೆಸರಿನ ಮುಂದೆ ನಮೂದಿಸುವುದು.
15. ಕ್ರೀಡಾಪಟುಗಳ ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪ್ರಾಂಶುಪಾಲರಿಂದ ದೃಢೀಕರಿಸಿ ನೊಂದಣಿ ಸಮಯದಲ್ಲಿ ಸಲ್ಲಿಸುವುದು.
16. ಕ್ರೀಡಾಪಟುಗಳ TA (To and Fro), 06/01/2025 ರ ಬೆಳಗಿನ ಲಘು ಉಪಹಾರ, ಮಧ್ಯಾಹ್ನದ ಊಟ ಮತ್ತು 08/01/2025 ರ ರಾತ್ರಿಯ ಊಟವನ್ನು ತಮ್ಮ ಸಂಸ್ಥೆಯ Sports Fundನಿಂದ ನಿರ್ವಹಿಸುವುದು.

ಜಂಟಿ ನಿರ್ದೇಶಕರು (ಸಿಡಿಸಿ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ:

ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು – ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.

ಪ್ರತಿ:

1. ಪ್ರಾಚಾರ್ಯರು, ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿಗಾಗಿ.
2. ಕಡತಕ್ಕೆ